# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 193
ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 14.12.2021
ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಎನ್.ಜಿ.ಇ.ಎಫ್. ಕಾರ್ಖಾನೆಗೆ ಸೇರಿದ ಸ್ವತ್ತುಗಳ ಚರಾಸ್ತಿ/ಸ್ಥಿರಾಸ್ತಿಗಳ ಯಾವುವು (ವಿವರ ನೀಡುವುದು) | ಎನ್.ಜಿ.ಇ.ಎಫ್. ಕಾರ್ಖಾನೆಗೆ ಸಂಬಂಧಪಟ್ಟಂತೆ ಚರಾಸ್ತಿ / ಸ್ಥಿರಾಸ್ತಿಗಳ ವಿವರಗಳು ಕೆಳಕಂಡತ್ತಿವೆ :<br>• **ಸ್ಥಿರಾಸ್ತಿ:** ಎನ್.ಜಿ.ಇ.ಎಫ್. ಲಿ., ಕಂಪನಿಯು ಬೆಂಗಳೂರಿನ ಕೆ.ಆರ್. ಪುರಂ ತಾಲ್ಲೂಕಿನ ಬೈಯಪ್ಪನಹಳ್ಳಿ ಮತ್ತು ಬೆನ್ನಿಗಾನಹಳ್ಳಿ ಗ್ರಾಮಗಳಲ್ಲಿ 119.665 ಎಕರೆ ಜಮೀನನ್ನು ಹೊಂದಿರುತ್ತದೆ. ಇದರಲ್ಲಿ 105ಎಕರೆ ಜಮೀನು ಕಾಂಪೌಂಡಿನ ಒಳಗಡೆ ಇದ್ದು, ಉಳಿದ ಜಮೀನು ಕಾಂಪೌಂಡಿನ ಹೊರಗಡೆ ಇದೆ. ಇದನ್ನು ಖಚಿತ ಪಡಿಸಿಕೊಳ್ಳಲು ಭೂ- ಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳ ಇಲಾಖೆಯನ್ನು ಕೋರಲಾಗಿದೆ. ವರದಿ ನಿರೀಕ್ಷಿಸಲಾಗಿದೆ.<br>• **ಚರಾಸ್ತಿ :** ಎನ್.ಜಿ.ಇ.ಎಫ್. ಲಿ., ಕಂಪನಿಯು ಕಚ್ಚಾಮಾಲಾಗಿ ಉಪಯೋಗಿಸುತ್ತಿದ್ದ ಸುಮಾರು 14.57 ಕೆ.ಜಿ. ಬೆಳ್ಳಿಯನ್ನು ಹಾಗೂ 5.5 ಕೆ.ಜಿ. ಮಿಶ್ರಲೋಹವನ್ನು ಹೊಂದಿರುತ್ತದೆ. |
| (ಆ) | ಬೆಂಗಳೂರು ನಗರದಲ್ಲಿ ಎನ್.ಜಿ.ಇ.ಎಫ್. ಕಾರ್ಖಾನೆಗೆ ಸೇರಿದ ಸ್ಥಿರಾಸ್ತಿಗಳ ಕುರಿತು ಪ್ರಸ್ತುತ ಸ್ಥಿತಿಗತಿಗಳ (ವಿವರ ನೀಡುವುದು) | ಎನ್.ಜಿ.ಇ.ಎಫ್. ಲಿ. ಕಂಪನಿಯು ಕೆ.ಆರ್. ಪುರಂ ತಾಲ್ಲೂಕಿನ ಬೈಯಪ್ಪನಹಳ್ಳಿ ಹಾಗೂ ಬೆನ್ನಿಗಾನಹಳ್ಳಿ ಗ್ರಾಮಗಳಲ್ಲಿ 119.665 ಎಕರ ಜಮೀನನ್ನು ಹೊಂದಿದ್ದು, ಇದರಲ್ಲಿ 105 ಎಕರ ಜಮೀನು ಕಾಂಪೌಂಡಿನ ಒಳಗಡೆ ಹಾಗೂ ಉಳಿದ ಜಮೀನು ಕಾಂಪೌಂಡಿನ ಹೊರಗಡೆ ಇರುತ್ತದೆ. ಪ್ರಸ್ತುತ ಕಾಂಪೌಂಡಿನ ಒಳಗಡೆ ಜಮೀನಿನಲ್ಲಿ ಮರ-ಗಿಡಗಳು ಹಾಗೂ ಕಾರ್ಖಾನೆಯ ಹಳೆಯ ಕಟ್ಟಡಗಳು ಇರುತ್ತವೆ. |

| | | |
|---|---|---|
| (ಇ) | ಬೆಂಗಳೂರು ನಗರದ ಎನ್.ಜಿ.ಇ.ಎಫ್. ಕಾರ್ಖಾನೆ ಪುನಃಶ್ಚೇತನ ಕುರಿತಂತೆ ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ದಿನಾಂಕ: 22.06.2017ರಲ್ಲಿ ಕಾರ್ಖಾನೆಯ ಪರಿಸಮಾಪ್ತಿ ಆದೇಶಕ್ಕೆ ಶಾಶ್ವತವಾಗಿ ತಡೆಯಾಜ್ಞೆ ನೀಡಿ ಎನ್.ಜಿ.ಇ.ಎಫ್.ನ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಲು ಸೂಚಿಸಿದೆ.<br>ದಿನಾಂಕ: 08.06.2021ರಂದು "Bengaluru Heritage & Environment Trust" ಹೆಸರಿನಲ್ಲಿ ಸಾರ್ವಜನಿಕ ದತ್ತಿ ಸಂಸ್ಥೆಯನ್ನು ನೋಂದಣಿ ಮಾಡಿದೆ. ಸದರಿ ಟ್ರಸ್ಟ್ ಎನ್.ಜಿ.ಇ.ಎಫ್.ನ ಭೂಮಿ ಮತ್ತು ಕಟ್ಟಡವನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಪರಿಕಲ್ಪನೆ ಸಿದ್ಧಪಡಿಸುತ್ತಿದೆ. |
| (ಈ) | ಬೆಂಗಳೂರು ನಗರದ ಎನ್.ಜಿ.ಇ.ಎಫ್. ಕಾರ್ಖಾನೆಯ ಸ್ಥಿರಾಸ್ತಿಗಳ ಕುರಿತಂತೆ ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು) | ಮೇಲೆ ವಿವರಿಸಿದಂತೆ, ಮಾನ್ಯ ಉಚ್ಛ ನ್ಯಾಯಾಲಯವು ಎನ್.ಜಿ.ಇ.ಎಫ್.ನ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಲು ಆದೇಶ ಹೊರಡಿಸಿರುವುದರಿಂದ ಎನ್.ಜಿ.ಇ.ಎಫ್.ನ ಭೂಮಿ ಮತ್ತು ಕಟ್ಟಡವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಪರಿಕಲ್ಪನೆ ಸಿದ್ಧಪಡಿಸಲಾಗುತ್ತಿದೆ. |

ಸಿಐ 23 ಸಿಇಎಲ್ 2021(ಇ)

**(ಮುರುಗೇಶ್ ಆರ್.ನಿರಾಣಿ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು